ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-3/20ಹೆಆ/02/2021-22

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ,
ಬೆಂಗಳೂರು-560012.
ದಿನಾಂಕ: 31-08-2021.

-: ಸುತ್ತೋಲೆ :-

ವಿಷಯ:- 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ತರಗತಿಗಳಿಗೆ ವಿದ್ಯಾರ್ಥಿಗಳ ಪ್ರವೇಶ ದಾಖಲಾತಿ ಮಿತಿಯನ್ನು 80 ರಿಂದ 100ಕ್ಕೆ ಹೆಚ್ಚಿಸಲು ಅನುಮತಿ ನೀಡುವ ಕುರಿತು.

ಉಲ್ಲೇಖ:- ಸರ್ಕಾರದ ಏಕ ಕಡತ ಸಂಖ್ಯೆ: ಪ್ರಾಪ್ರೌಶಿ/ಸಿಆರ್/ಕಡತ/36/2021 ದಿನಾಂಕ: 26-08-2021.

******

ರಾಜ್ಯದ ಖಾಸಗಿ ಅನುದಾನಿತ / ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ತರಗತಿ ದಾಖಲಾತಿಗೆ ಸಂಬಂಧಿಸಿದಂತೆ 2021-22ನೇ ಸಾಲಿಗೆ ಮಾತ್ರ ಸೀಮಿತಗೊಳಿಸಿ, ಕಾಲೇಜಿನಲ್ಲಿ ಹೆಚ್ಚುವರಿ ಅಗತ್ಯ ಮೂಲಭೂತ ಸೌಕರ್ಯಗಳು ಇರುವುದನ್ನು ಖಚಿತಪಡಿಸಿಕೊಂಡು ಅಗತ್ಯತೆ ಹಾಗೂ ಬೇಡಿಕೆಯಾನುಸಾರ, ಮಂಜೂರಾತಿ ಪಡೆದು ಬೋಧಿಸುತ್ತಿರುವ ಪ್ರತಿ ಸಂಯೋಜನೆಗೆ 20 ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಗೆ ಹಾಗೂ ಒಂದಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಪ್ರತಿ ವಿಭಾಗಕ್ಕೆ 20 ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಗೆ ಅನುಮತಿ ನೀಡಲು ಅವಕಾಶ ಕಲ್ಪಿಸಿ ಆದೇಶಿಸಿದೆ.

ಸರ್ಕಾರದ ಆದೇಶದ ಅನುಸಾರ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿ ಬರುವ ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸ್ವೀಕೃತಗೊಂಡಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಂಯೋಜನೆಯ ಪ್ರತಿ ವಿಭಾಗಕ್ಕೆ ಹಾಗೂ ಒಂದಕ್ಕಿಂತ ಹೆಚ್ಚುವರಿ ಸಂಯೋಜನೆಗಳಿದ್ದಲ್ಲಿ ಪ್ರತಿ ವಿಭಾಗಕ್ಕೆ 20 ವಿದ್ಯಾರ್ಥಿಗಳ ಹೆಚ್ಚುವರಿ ಪ್ರವೇಶಾತಿಗೆ ತಮ್ಮ ಹಂತದಲ್ಲೇ ನಿಯಮಾನುಸಾರ ಪರಿಶೀಲಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿದೆ. ಅನುಮತಿ ನೀಡಿರುವ ಕ್ರೋಢೀಕೃತ ಪಟ್ಟಿಯನ್ನು ಮಾತ್ರ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಈ ಸುತ್ತೋಲೆಯು 2021-22ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತವಾಗಿರುತ್ತದೆ.

**ಷರತ್ತುಗಳು:-**

1. ಹೆಚ್ಚುವರಿಯಾಗಿ ಅನುಮತಿ ನೀಡಲು ಕೋರಿರುವ ಕಾಲೇಜಿನಲ್ಲಿರುವ ಆ ಸಂಯೋಜನೆ/ವಿಭಾಗವು ಇಲಾಖೆಯಿಂದ ಬೋಧಿಸಲು ಅನುಮತಿ ನೀಡಲಾದ ಸಂಯೋಜನೆಯಾಗಿರತಕ್ಕದ್ದು.
2. ಕೆಲವು ಕಾಲೇಜುಗಳಲ್ಲಿ ಎರಡು/ಮೂರು ಸಂಯೋಜನೆಗಳ ಒಂದು ವಿಭಾಗವೆಂದು ಅನುಮತಿ ನೀಡಲಾಗಿದೆ ಅಂತಹ ಸಂಯೋಜನೆಗಳ ಒಂದು ವಿಭಾಗವಿದ್ದರೆ ಒಂದೇ ವಿಭಾಗವೆಂದು ಪರಿಗಣಿಸಿ ಅನುಮತಿ ನೀಡುವುದು.
3. ಅನುಮತಿ ನೀಡುವಾಗ ಸದರಿ ಸಂಯೋಜನೆ/ವಿಭಾಗವು ಆ ಕಾಲೇಜಿನಲ್ಲಿ ವಿಚ್ಛಿನ್ನತೆ ಇಲ್ಲದೇ ನಡೆದಿರುವ ಬಗ್ಗೆ ಖಚಿತಪಡಿಸಿಕೊಂಡಿರಬೇಕು. ವಿಚ್ಛಿನ್ನತೆ ಹೊಂದಿರುವ ಸಂಯೋಜನೆಗೆ ಅನುಮತಿ ನೀಡಿದಲ್ಲಿ ಮುಂದಿನ ಆಗು-ಹೋಗುಗಳಿಗೆ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರನ್ನೇ ಹೊಣೆಗಾರಾರನ್ನಾಗಿಸಲಾಗುವುದು.
4. ಹೆಚ್ಚುವರಿ ಪ್ರವೇಶಕ್ಕೆ ಅನುಮತಿ ಕೋರಿರುವ ಸಂಯೋಜನೆಗೆ ಅಗತ್ಯ ಕೊಠಡಿ ಹಾಗೂ ಮೂಲಭೂತ ಸೌಲಭ್ಯಗಳು ಇರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

Scanned with CamScanner

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಈ ಕುರಿತು ಹೆಚ್ಚಿನ ಪ್ರಚಾರ ಕೈಗೊಳ್ಳತಕ್ಕದ್ದು.

ಪ್ರತಿಗಳು ಮಾಹಿತಿಗಾಗಿ :–

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು–560001.
2. ಜಂಟಿ ನಿರ್ದೇಶಕರ / ಉಪ ನಿರ್ದೇಶಕರ (ಮಾನ್ಯತೆ & ಅನುದಾನ) ಆಪ್ತಶಾಖೆ.
3. ಸಹಾಯಕ ನಿರ್ದೇಶಕರು, ಇ–ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ– ಇವರಿಗೆ ಅಂತರ್‌ಜಾಲದಲ್ಲಿ ಮಾಹಿತಿಯನ್ನು ಅಳವಡಿಸಲು.
4. ಮಾನ್ಯತೆ ಮತ್ತು ಅನುದಾನ ಶಾಖೆಯ ಅಧಿಕಾರಿ / ಸಿಬ್ಬಂದಿಗಳಿಗೆ.
5. ಕಛೇರಿ / ಹೆಚ್ಚುವರಿ ಪ್ರತಿ.

Scanned with CamScanner